KATK010000032021

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>**

**<u>ವಿಶೇಷ ಮೊಕದ್ದಮೆ.2/2021</u>**

ಪ್ರಾ.ಸಾ. ಃ **1**

ದೋ.ಸಾ. ಃ **3**

ದಿ.**12.12.2024.**

| | |
|---|---|
| ಹೆಸರು | ಃ ಕೆ.ಆರ್. ನಂಜುಂಡ ಶರ್ಮ |
| ತಂದೆಯ ಹೆಸರು | ಃ ರಾಮಚಂದ್ರನ್ ಹೆಚ್.ಎನ್. |
| ವಯಸ್ಸು | ಃ **27** ವರ್ಷ |
| ಉದ್ಯೋಗ | ಃ ಪ್ರಥಮ ದರ್ಜೆ ಸಹಾಯಕ, ತಾಲ್ಲೂಕು ಕಚೇರಿ, ತುಮಕೂರು |
| ವಾಸಸ್ಥಳ | ಃ ನೃಪತುಂಗ ಬಡಾವಣೆ, ತುಮಕೂರು |

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ</u>**

1. ದಿ.19.06.2020 ರಿಂದ ನಾನು ತುಮಕೂರು ತಾಲ್ಲೂಕು ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.
2. ದಿ.**19.09.2020** ರಂದು ತುಮಕೂರಿನ ಸಿಇಎನ್ ಪೋಲೀಸ್ ಠಾಣೆಯ ಗಾಂಜಾ ಪ್ರಕರಣದಲ್ಲಿ ಪಂಚರಾಗಿ ಸಹಕರಿಸಲು ನಮ್ಮ ತಹಸೀಲ್ದಾರರು ನನ್ನನ್ನು ಮತ್ತು ಡಿ ಗ್ರೂಪ್ ನೌಕರ ಹರೀಶರವರನ್ನು ನೇಮಕ ಮಾಡಿ ಜ್ಞಾಪನ ಪತ್ರವನ್ನು ಕೊಟ್ಟಿದ್ದರು. ಆ ಜ್ಞಾಪನ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ**1** ಎಂದು ಗುರುತಿಸಲಾಯಿತು. ತಹಸೀಲ್ದಾರರು ನನ್ನನ್ನು ಮತ್ತು ಹರೀಶ್ ರವರನ್ನು ಪಂಚರಾಗಿ ನೇಮಕ ಮಾಡಿ ಜ್ಞಾಪನ ಪತ್ರ ಕೊಟ್ಟ ನಂತರ ನಾನು ಮತ್ತು ಹರೀಶ್ ಬೆಳಿಗ್ಗೆ **10.15** ಗಂಟೆಗೆ ಸಿಇಎನ್ ಪೋಲೀಸ್ ಠಾಣೆಗೆ ಹೋಗಿ ಹಾಜರಾದೆವು. ನಾನು ಸಿಇಎನ್ ಪೋಲೀಸ್ ಠಾಣೆಗೆ ಹರೀಶ್ ರವರ ಜೊತೆ ಹೋದಾಗ ಠಾಣೆಯಲ್ಲಿ ಪತ್ರಾಂಕಿತ ಅಧಿಕಾರಿಯಾಗಿ ವಿಷಯ ಪರಿವೀಕ್ಷಕರಾದ ಸುನಿಲ್ ಕುಮಾರ್, ಕಾನೂನು

ಮಾಪನ ಶಾಸ್ತ್ರ ನಿರೀಕ್ಷಕರಾದ ರವೀಶ್ ಚಂದ್ರ ಇದ್ದರು. ಉರ್ಡಿಗೆರೆ ಬಸವೇಶ್ವರ ದೇವಸ್ಥಾನದ ಎದುರು ಒಬ್ಬ ಆಸಾಮಿ ಅಮ್ಮದ್ ಖಾನ್ ಗಾಂಜಾ ಮಾರಾಟ ಮಾಡುವಾಗ ಪೋಲೀಸರಿಗೆ ಸಿಕ್ಕಿಬಿದ್ದಿದ್ದು, ಅಲ್ಲಿಗೆ ಮಹಜರ್ ಮಾಡಲು ಹೋಗಬೇಕೆಂದು ಠಾಣೆಯಲ್ಲಿ ಇದ್ದಂತಹ ಪೋಲೀಸ್ ಉಪ ನಿರೀಕ್ಷಕರಾದ ಶಮೀನ್ ನಮಗೆ ತಿಳಿಸಿದರು.

**3.** ನಾವು ಪೋಲೀಸ್ ಜೀಪಿನಲ್ಲಿ ಉರ್ಡಿಗೆರೆ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದ ಹತ್ತಿರ ಹೋಗಿ ಜೀಪನ್ನು ನಿಲ್ಲಿಸಿ, ಅಮ್ಮದ್ ಖಾನ್ ರವರ ಮನೆಗೆ ಹೋದೆವು. ಅಲ್ಲಿಗೆ ಹೋದಾಗ ಪೋಲೀಸರ ಜೊತೆಗೆ ನ್ಯಾಯಾಲಯದ ಮುಂದಿರುವ ಆರೋಪಿ ಅಮ್ಜದ್ ಖಾನ್ ಇದ್ದರು. ಆರೋಪಿಯ ಅಂಗಶೋಧನೆ ಮಾಡುವ ಸಲುವಾಗಿ ಪತ್ರಾಂಕಿತ ಅಧಿಕಾರಿ ಆರೋಪಿಯನ್ನು ಕೇಳಿದರು. ಅದಕ್ಕೆ ಆರೋಪಿ ಒಪ್ಪಿಕೊಂಡನು. ಪತ್ರಾಂಕಿತ ಅಧಿಕಾರಿ ಮತ್ತು ನಾವು ಸ್ವ ಅಂಗಶೋಧನೆಯನ್ನು ಮಾಡಿಕೊಂಡು, ಯಾವುದೇ ಗಾಂಜಾ ಇಲ್ಲವೆಂದು ಖಾತ್ರಿಪಡಿಸಿಕೊಂಡು, ನಂತರ ಆರೋಪಿಯ ಅಂಗಶೋಧನೆಯನ್ನು ಮಾಡಲಾಯಿತು. ಆರೋಪಿಯ ಕೈಯಲ್ಲಿ ಪೇಪರ್ ಕವರಿನಲ್ಲಿ ಅರ್ಧಂಬರ್ಧ ಒಣಗಿರುವ ಗಾಂಜಾ ಸೊಪ್ಪು, ಬೀಜ ಮೊಗ್ಗು ಇರುವಂತಹ ಗಾಂಜಾ ಇತ್ತು. ಅದರ ವಾಸನೆಯಿಂದ ಗಾಂಜಾ ಎಂದು ಖಾತ್ರಿಪಡಿಸಿಕೊಂಡೆವು. ಆ ಸಮಯದಲ್ಲಿ ಹಾಜರಿದ್ದ ಕಾನೂನು ಮಾಪನ ಶಾಸ್ತ್ರ ಇಲಾಖೆಯ ರವೀಶ್ ಚಂದ್ರ ರವರಿಗೆ ಆ ಪೇಪರಿನಲ್ಲಿದ್ದ ಗಾಂಜಾವನ್ನು ತೂಕ ಮಾಡಲು ಹೇಳಿದ್ದು ರವೀಶ್ ಚಂದ್ರ ರವರು ತಾನು ತಂದಿದ್ದ ಎಲೆಕ್ಟ್ರಾನಿಕ್ ತೂಕದ ಯಂತ್ರವನ್ನು ಜೀರೋ ಮಾಡಿ ಗಾಂಜಾವನ್ನು ತೂಕ ಮಾಡಿದಾಗ ಅದರ ತೂಕ ಕವರ್ ಸೇರಿ **400** ಗ್ರಾಂ ಕಂಡುಬಂತು. ಆ ಗಾಂಜಾವನ್ನು ಮಹಜರ್ ಮಾಡಿ, ಬಿಳಿ ಬಟ್ಟೆಯಲ್ಲಿ ಹಾಕಿ, ಬಾಯನ್ನು ಕಟ್ಟಿ, ಸಿ ಎಂಬ ಇಂಗ್ಲೀಷ್ ಅಕ್ಷರದಿಂದ ಅರಗು ಹಾಕಿ ಸೀಲ್ ಮಾಡಿದರು. ಮಹಜರನ್ನು ಮಾಡುವಾಗ ಬೆಳಿಗ್ಗೆ **11.15-12.15** ಗಂಟೆ ಸಮಯ ಆಗಿತ್ತು. ಸ್ಥಳದಲ್ಲಿ ಮಹಜರನ್ನು ಟೈಪು ಮಾಡಿ, ಪ್ರಿಂಟ್ ತೆಗೆದ ನಂತರ ಮಹಜರಿಗೆ ಸಹಿ ಮಾಡಿದ್ದೇನೆ. ಆ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ**2** ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ**2(ಎ)** ಎಂದು ಗುರುತಿಸಲಾಯಿತು.

**4. 1** ನೇ ಆರೋಪಿ ಅಮ್ಜದ್ ಖಾನ್ ಅನ್ನು ವಿಚಾರಿಸಿದಾಗ ದುಡ್ಡಿನ ಆಸೆಗೋಸ್ಕರ ಆ

ಗಾಂಜಾವನ್ನು ಮಾರಾಟ ಮಾಡಲು ಇಟ್ಟುಕೊಂಡಿದ್ದೇನೆ, ಆ ಬಗ್ಗೆ ಯಾವುದೇ ಪರವಾನಗಿ ಇಲ್ಲ ಎಂದು ಹೇಳಿದನು. ಆ ಗಾಂಜಾವನ್ನು ನಾರಾಯಣಪ್ಪ ಎಂಬುವವರಿಂದ ಖರೀದಿ ಮಾಡಿದ್ದೇನೆಂದು ಹೇಳಿದನು. ನಾರಾಯಣಪ್ಪನನ್ನು ವಿಚಾರಣೆ ಮಾಡಲು ಮತ್ತು ಮಹಜರ್ ಮಾಡಲು ಪೋಲೀಸರು ನಾವೇ ಪಂಚಾಯತುದಾರರಾಗಿ ಸಹಕರಿಸಬೇಕೆಂದು ಕೋರಿಕೊಂಡ ಮೇರೆಗೆ **1** ನೇ ಆರೋಪಿ ಅಮ್ಜದ್ ಖಾನನ ಮನೆಯಿಂದ **1** ಕಿ ಮೀ ದೂರದಲ್ಲಿರುವ ಬೇವಿನಹಳ್ಳಿ ಕ್ರಾಸ್ ನಲ್ಲಿರುವ ನಾರಾಯಣಪ್ಪನ ಮನೆಗೆ ನಮ್ಮನ್ನು ಕರೆದುಕೊಂಡು ಹೋದರು. ಅಲ್ಲಿಗೆ ಹೋಗಿ ಜೀಪನ್ನು ನಿಲ್ಲಿಸಿ, ಮುಂದುವರೆದು **2** ನೇ ಆರೋಪಿ ನಾರಾಯಣಪ್ಪನ ಮನೆಗೆ **1** ನೇ ಆರೋಪಿ ಕರೆದುಕೊಂಡು ಹೋದನು. ಒಂದು ಕಾಂಪೌಂಡು ಒಳಗಡೆ **2** ನೇ ಆರೋಪಿ ನಾರಾಯಣಪ್ಪ ನಿಂತಿದ್ದನು. ಆತನಿಂದಲೇ ಗಾಂಜಾ ಖರೀದಿ ಮಾಡಿದ್ದೇನೆಂದು **1** ನೇ ಆರೋಪಿ ಅಮ್ಜದ್ ಖಾನ್ **2** ನೇ ಆರೋಪಿಯನ್ನು ತೋರಿಸಿ ಹೇಳಿದನು. ನಾರಾಯಣಪ್ಪನನ್ನು ವಿಚಾರಿಸಿದಾಗ **1** ನೇ ಆರೋಪಿಗೆ ಗಾಂಜಾ ಮಾರಾಟ ಮಾಡಿದ್ದು ಒಪ್ಪಿಕೊಂಡನು. ಗಾಂಜಾವನ್ನು ಎಲ್ಲಿಟ್ಟಿದ್ದೀ ಎಂದು ಕೇಳಿದಾಗ **2** ನೇ ಆರೋಪಿ ನಾರಾಯಣಪ್ಪನ ಮನೆಯ ಮುಂದೆ ತೆಂಗು, ಬಾಳೆಗಿಡ, ಅಡಿಕೆ ಮತ್ತು ನುಗ್ಗೇಗಿಡಗಳ ಬುಡದಲ್ಲಿ ಗಾಂಜಾವನ್ನು ಇಟ್ಟ ಬಗ್ಗೆ **2** ನೇ ಆರೋಪಿ ನಾರಾಯಣಪ್ಪ ತೋರಿಸಿದನು. ಆ ಗಾಂಜಾವನ್ನು ಮಾರಾಟ ಮಾಡುವ ಸಲುವಾಗಿ ಇಟ್ಟಿದ್ದೇನೆಂದು **2** ನೇ ಆರೋಪಿ ನಾರಾಯಣಪ್ಪ ಹೇಳಿದನು. ಗಾಂಜಾ ಇಟ್ಟಿದ್ದ ಜಾಗಕ್ಕೆ ನಾರಾಯಣಪ್ಪನೇ ಕರೆದುಕೊಂಡು ಹೋದನು. ಆ ಮರಗಳ ಬುಡದಲ್ಲಿ ಪ್ಲಾಸ್ಟಿಕ್ ಚೀಲದಲ್ಲಿ ಗಾಂಜಾ ಇಟ್ಟಿದ್ದನು. ಆ ಚೀಲದ ಒಳಗಡೆ ಅರ್ಧಂಬರ್ಧ ಒಣಗಿದ ಗಾಂಜಾ ಸೊಪ್ಪು, ಮೊಗ್ಗು ಬೀಜ ಕಂಡುಬಂತು. ಆ ಗಾಂಜಾ ಎಲ್ಲಿಂದ ಬಂತು ಎಂದು ನಾರಾಯಣಪ್ಪನನ್ನು ಕೇಳಿದರು. ಅವರ ಮನೆಯಿಂದ **500** ಮೀಟರ್ ದೂರದಲ್ಲಿ ಜೋಳದ ಬೆಳೆಯ ಮಧ್ಯದಲ್ಲಿ ಗಾಂಜಾ ಗಿಡವನ್ನು ಬೆಳೆಸಿದ್ದೇನೆಂದು, ಅದರಿಂದ ಆ ಗಾಂಜಾವನ್ನು ತಂದು ಇಲ್ಲಿಟ್ಟಿದ್ದೇನೆಂದು ಹೇಳಿದನು. ಗಿಡಗಳ ಬುಡದಲ್ಲಿ ಇಟ್ಟಂತಹ ಗಾಂಜಾವನ್ನು ರವೀಶ್ ಚಂದ್ರ ರವರು ತೂಕದ ಯಂತ್ರದಿಂದ ತೂಕ ಮಾಡಿದಾಗ ಅದರ ಒಟ್ಟು ತೂಕ **2** ಕೆಜಿ **820** ಗ್ರಾಂ ಇತ್ತು. ಅದನ್ನು ಬಿಳಿ ಬಟ್ಟೆಯಲ್ಲಿ ಹಾಕಿ, ಬಾಯನ್ನು ಕಟ್ಟಿ, ಸಿ ಎಂಬ ಇಂಗ್ಲೀಷ್ ಅಕ್ಷರದಿಂದ ಅರಗು ಹಾಕಿ ಸೀಲ್ ಮಾಡಿದರು. ಸ್ಥಳದಲ್ಲಿ ಮಹಜರನ್ನು ಟೈಪು ಮಾಡಿ, ಪ್ರಿಂಟ್ ತೆಗೆದ ನಂತರ ನಾನು ಸಹಿ ಮಾಡಿದ್ದೇನೆ. ಆ ಮಹಜರನ್ನು

ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ**3** ಎಂದು**,** ಆವಾಗ ಮಾಡಿದ ನನ್ನ ಸಹಿಯನ್ನು ನಿಶಾನೆ ಪಿ**3(**ಎ**)**ಎಂದು ಗುರುತಿಸಲಾಯಿತು.

**5.** ಅಲ್ಲಿಂದ **2** ನೇ ಆರೋಪಿ ನಾರಾಯಣಪ್ಪ ನಮ್ಮನ್ನು ಲಕ್ಷ್ಮೀದೇವಮ್ಮನಿಗೆ ಸೇರಿದ ಜಮೀನಿನ ಹತ್ತಿರ ಕರೆದುಕೊಂಡು ಹೋದನು. ಲಕ್ಷೀದೇವಮ್ಮನಿಗೆ ಸೇರಿದ ಜಮೀನಿನಲ್ಲಿ ನಾರಾಯಣಪ್ಪ ಗಾಂಜಾ ಗಿಡಗಳನ್ನು ಬೆಳೆಸಿದ ಬಗ್ಗೆ ತೋರಿಸಿದನು. ಗಾಂಜಾ ಗಿಡಗಳನ್ನು ಬೆಳೆಸಿದ ಬಗ್ಗೆ ದಾಳಿಯಾಗುತ್ತದೆ ಎಂದು ಟಿವಿಯಲ್ಲಿ ನ್ಯೂಸ್ ಬಂದ ನಂತರ ಲಕ್ಷ್ಮೀದೇವಮ್ಮನ ಜಮೀನಿನಲ್ಲಿ ಬೆಳೆದಂತಹ ಗಾಂಜಾ ಗಿಡಗಳನ್ನು ಕಿತ್ತು ತನ್ನ ಮನೆಯ ಮುಂದೆ ಅಡಿಕೆ**,** ತೆಂಗು**,** ನುಗ್ಗೇಗಳ ಬುಡದಲ್ಲಿ ಇಟ್ಟಿದ್ದೇನೆಂದು ಹೇಳಿದನು. ಲಕ್ಷ್ಮೀದೇವಮ್ಮನ ಜಮೀನಿಗೆ ಹೋದಾಗ ಗಿಡಗಳನ್ನು ಕಿತ್ತ ಬಗ್ಗೆ ಗುಂಡಿ ಕಂಡುಬಂತು. ಆ ಜಾಗದಲ್ಲಿ ಸ್ಯಾಂಪಲ್ ಮಣ್ಣನ್ನು ತೆಗೆದುಕೊಂಡರು. ಸುಮಾರು **50** ಗ್ರಾಂ ನಷ್ಟು ಸ್ಯಾಂಪಲ್ ಮಣ್ಣನ್ನು ಮತ್ತು **50** ಗ್ರಾಂ ಸಾದಾ ಮಣ್ಣನ್ನು ತೆಗೆದು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ**,** ಬಾಯನ್ನು ಕಟ್ಟಿ**,** ಸಿ ಎಂಬ ಇಂಗ್ಲೀಷ್ ಅಕ್ಷರದಿಂದ ಅರಗು ಹಾಕಿ ಸೀಲ್ ಮಾಡಿದರು. ನಂತರ ಮಹಜರನ್ನು ಮುಂದುವರೆಸಿ**,** ಟೈಪ್ ಮಾಡಿ**,** ಪ್ರಿಂಟ್ ತೆಗೆದು**,** ನಮ್ಮ ಸಹಿ ತೆಗೆದುಕೊಂಡರು. ಆ ಸಹಿಯನ್ನು ನಿಶಾನೆ ಪಿ**3(**ಬಿ**)** ಎಂದು ಗುರುತಿಸಲಾಯಿತು. ಈ ಎಲ್ಲಾ ಮಹಜರ್ ಅನ್ನು ಮಧ್ಯಾಹ್ನ **1.00** ಗಂಟೆಯಿಂದ **3.00** ಗಂಟೆಯ ಅವಧಿಯಲ್ಲಿ ಮಾಡಲಾಯಿತು. ಆರೋಪಿಗಳಾದ ಅಮ್ಜದ್ ಖಾನ್ ಮತ್ತು ನಾರಾಯಣಪ್ಪನನ್ನು ಈಗ ನೋಡಿ ಗುರುತಿಸಿದ್ದೇನೆ. ಆ ದಿನ ಅಮಾನತ್ತುಪಡಿಸಿಕೊಂಡ ಮಣ್ಣಿನ ಸೀಲ್ಡ್ ಪ್ಯಾಕೇಟ್ ನಲ್ಲಿ ನನ್ನ ಸಹಿಗಳು ಇವೆ. ಪ್ಯಾಕೇಟ್ ನ ಸೀಲ್ ಗಳನ್ನು ತೆಗೆದು ಸಾಕ್ಷಿಗೆ ತೋರಿಸಲಾಯಿತು. ಸ್ಯಾಂಪಲ್ ಮಣ್ಣನ್ನು ಮು ಮಾ **1** ಎಂದು**,** ಸಾದಾ ಮಣ್ಣನ್ನು ಮು ಮಾ **2** ಎಂದು ಗುರುತಿಲಾಯಿತು. ಈ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

**(**ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆ ಮಾಡಲು ಮಾನ್ಯ ಅಭಿಯೋಜಕರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು**).**
**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು

ಸಾಕ್ಷಿಯನ್ನು ಪುನಃ ದಿ.29.04.2025 ರಂದು ಕರೆಯಿಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

6. 1 ನೇ ಆರೋಪಿಯ ಕಡೆಯಿಂದ ಗಾಂಜಾ ಜಪ್ತುಪಡಿಸಿಕೊಳ್ಳುವ ಸಮಯದಲ್ಲಿ ಮಳೆ ಬರುತ್ತಿತ್ತು, ಆದ್ದರಿಂದ ಫೋಟೋ ತೆಗೆಯಲಿಲ್ಲ. 1 ನೇ ಆರೋಪಿ ತೋರಿಸಿದ 2 ನೇ ಆರೋಪಿಯ ಮನೆಯ ಹತ್ತಿರ ತೆಗೆದ ಫೋಟೋಗಳನ್ನು ಈಗ ನೋಡುತ್ತಿದ್ದು ಫೋಟೋಗಳ ಬಗ್ಗೆ ಸಿಡಿ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65-ಬಿ ಅಡಿಯಲ್ಲಿ ಪ್ರಮಾಣಪತ್ರ ಸಲ್ಲಿಸದೇ ಇದ್ದುದರಿಂದ ಅವುಗಳನ್ನು ಆರೋಪಿತರ ಪರ ವಕೀಲರ ಈ ತಕರಾರಿಗೆ ಒಳಪಟ್ಟು ನಿಶಾನೆ ಪಿ4 ರಿಂದ 8 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ.ಜಿ.ಎಸ್.ರೆಹಮಾನ್ ವಕೀಲರಿಂದ 1 ನೇ ಆರೋಪಿತ ಪರವಾಗಿ :**

7. ನಾನು ಪ್ರತಿದಿನ ಕಚೇರಿಗೆ ಬೆಳಿಗ್ಗೆ 10.00 ಗಂಟೆಗೆ ಬರುತ್ತೇನೆ. ಪೋಲೀಸರು ನೇರವಾಗಿ ತಹಸೀಲ್ದಾರ್ ರವರಿಗೆ ಪತ್ರ ಬರೆದಿದ್ದರು. ಆ ಪತ್ರದ ಆಧಾರದ ಮೇಲೆ ತಹಸೀಲ್ದಾರ್ ರವರು ನಮಗೆ ಜ್ಞಾಪನ ಪತ್ರ ಕೊಟ್ಟಿದ್ದರು. ತಹಸೀಲ್ದಾರ್ ರವರು ನನಗೆ ತಿಳಿಸಿದಾಗ ಬೆಳಿಗ್ಗೆ 9.30 ಗಂಟೆಯಾಗಿತ್ತು. ನಾನು ಪೋಲೀಸ್ ಠಾಣೆಗೆ ಹೋಗಿದ್ದಾಗ ಸುನಿಲ್ ಕುಮಾರ್, ವಿಷಯ ಪರಿವೀಕ್ಷಕರು, ಕಾನೂನು ಮಾಪನ ಶಾಸ್ತ್ರ ಇಲಾಖೆಯ ರವೀಶ್ ಚಂದ್ರ ಮತ್ತು ಪೋಲೀಸ್ ನಿರೀಕ್ಷಕರಾದ ಶಮೀನ್ ಇದ್ದರು. ಠಾಣೆಗೆ ಹೋಗಿದ್ದಾಗ ಯಾರು ದೂರು ಕೊಟ್ಟಿದ್ದರು, Crime ನಂಬರ್ ಏನು ಎಂದು ತಿಳಿಸಿದ್ದರು. ಆ ವಿಚಾರವನ್ನು ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ. ಯಾರು ದೂರು ಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. ಪೋಲೀಸ್ ಠಾಣೆಯಿಂದ ಉರ್ಡಿಗೆರೆ ಗ್ರಾಮಕ್ಕೆ ಹೋಗಲು 30 ನಿಮಿಷ ಬೇಕು. ಆ ದಿನ ನಾವು ಎರಡು ಜೀಪುಗಳಲ್ಲಿ ಒಟ್ಟು 8-10 ಜನ ಉರ್ಡಿಗೆರೆ ಗ್ರಾಮಕ್ಕೆ ಹೋಗಿದ್ದೆವು. ಜೀಪ್ ನಂಬರ್ ಈಗ ನೆನಪಿಲ್ಲ. ನಾವು ಉರ್ಡಿಗೆರೆ ಗ್ರಾಮಕ್ಕೆ ಹೋದಾಗ ಬೆಳಿಗ್ಗೆ 10.50-11.00 ಗಂಟೆಯಾಗಿತ್ತು. ನಾವು ಉರ್ಡಿಗೆರೆ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದ ಹತ್ತಿರ ಹೋಗಿ ಸಿಸಿ ರಸ್ತೆಯಲ್ಲಿ ನಡೆದುಕೊಂಡು ಮುಂದೆ ಹೋದಾಗ ಪೋಲೀಸರು 1 ನೇ ಆರೋಪಿಯನ್ನು ಹಿಡಿದುಕೊಂಡಿದ್ದರು. ಆತನನ್ನು ಹಿಡಿದುಕೊಂಡ ಪೋಲೀಸರ ಹೆಸರು ನನಗೆ ನೆನಪಿಲ್ಲ.

1 ನೇ ಆರೋಪಿಯನ್ನು ಹಿಡಿದ ಜಾಗ 1 ನೇ ಆರೋಪಿಯ ಮನೆಯ ಮಾಲೀಕರಾದ ಕಾಂತಣ್ಣನವರಿಗೆ ಸೇರಿದ್ದಾಗಿತ್ತು. ಆ ಜಾಗಕ್ಕೆ ಜೀಪು ಹೋಗುವುದಿಲ್ಲ. ಅಕ್ಕಪಕ್ಕದ ಮನೆಯವರ ಹೆಸರು ಹೇಳಲಾಗುವುದಿಲ್ಲ. ಆ ಕವರು 1 ನೇ ಆರೋಪಿಯ ಕೈಯಲ್ಲಿ ಇತ್ತೇ, ಪೋಲೀಸರ ಕೈಯಲ್ಲಿ ಇತ್ತೇ ಎಂದು ಕೇಳಿದಾಗ 1 ನೇ ಆರೋಪಿಯ ಕೈಯಲ್ಲಿತ್ತು ಎಂದು ಸಾಕ್ಷಿ ಹೇಳುತ್ತಾರೆ. ನಾವು ಹೋಗಿದ್ದ ಮನೆ 1 ನೇ ಆರೋಪಿಯ ವಾಸದ ಮನೆ. ಪೋಲೀಸರು 1 ನೇ ಆರೋಪಿಗೆ ಶೋಧನಾ ವಾರಂಟ್ ಕೊಟ್ಟರೇ ಎಂದು ನನಗೆ ಗೊತ್ತಿಲ್ಲ. 1 ನೇ ಆರೋಪಿಗೆ ಅಂಗಶೋಧನೆ ಮಾಡುವಾಗ ನೋಟೀಸ್ ಕೊಟ್ಟರೇ ಎಂದು ನೆನಪಿಲ್ಲ. ಕವರ್ ನ ಕಲರ್ ಈಗ ನೆನಪಿಲ್ಲ. ಮಹಜರ್ ಯಾರು ಬರೆದರು ಎಂದು ಈಗ ನೆನಪಿಲ್ಲ. ಆ ದಿನ 1 ನೇ ಆರೋಪಿಯ ಕೈಯಲ್ಲಿ ಗಾಂಜಾ ಕವರ್ ಇರಲಿಲ್ಲ ಎಂದರೆ ಸರಿಯಲ್ಲ. ಆ ದಿನ ಗಾಂಜಾ ಮೊಗ್ಗು, ಕಡ್ಡಿ ತೂಕ ಮಾಡಿದಾಗ ಒಟ್ಟು 400 ಗ್ರಾಂ ಇತ್ತು. ಆ ದಿನ ಗಾಂಜಾ ತೂಕ ಮಾಡಿದ ಯಂತ್ರದ ಹೆಸರು ಗೊತ್ತಿಲ್ಲ. ಐಎಸ್ಐ ಮಾರ್ಕ್ ಇತ್ತು.

**8.** ನಾವು ಹೋದಾಗ ಪ್ಯಾಸೇಜ್ ನಲ್ಲಿ ಶೀಟಿನ ಮನೆ ಇತ್ತು. ಆ ಶೀಟ್ ಇದ್ದುದರಿಂದ ಮಳೆ ಬರಲು ಸಾಧ್ಯವಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ಫೋಟೋ ತೆಗೆಯಬಹುದಿತ್ತು ಎಂದರೆ ಮಳೆ ಬರುತ್ತಿತ್ತು ಎಂದು ಸಾಕ್ಷಿ ಹೇಳುತ್ತಾರೆ. ಮಳೆ ಬಂದಿದ್ದರಿಂದ ಫೋಟೋ ತೆಗೆಯಲಾಗಲಿಲ್ಲ ಎಂದು ಮಹಜರಿನಲ್ಲಿ ಬರೆದಿದೆಯೇ ಎಂದು ಈಗ ನೆನಪಿಲ್ಲ. ಆ ಜಾಗದ ಚಕ್ಕುಬಂದಿ ಹೇಳಲಾಗುವುದಿಲ್ಲ. ಆ ದಿನ ನಾನು ಸ್ಥಳಕ್ಕೆ ಹೋಗಿಲ್ಲ, ಮಹಜರನ್ನು ಪೋಲೀಸ್ ಠಾಣೆಯಲ್ಲಿ ತಯಾರಿಸಲಾಯಿತು ಎಂದರೆ ಸರಿಯಲ್ಲ. ಆ ದಿನ ಕಚೇರಿಗೆ ಹಾಜರಾದ ಬಗ್ಗೆ ಹಾಜರಾತಿ ಪತ್ರ ನಾನು ಹಾಜರುಪಡಿಸಿಲ್ಲ, ಪೋಲೀಸರು ಕೇಳಿಲ್ಲ. 1 ನೇ ಆರೋಪಿ ನನ್ನ ಮುಂದೆ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಗಾಂಜಾವನ್ನು 2 ನೇ ಆರೋಪಿಯಿಂದ ಖರೀದಿ ಮಾಡಿದೆ ಎಂದು 1 ನೇ ಆರೋಪಿ ಹೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ 2 ನೇ ಆರೋಪಿ ಮನೆ ಹತ್ತಿರ ಕರೆದುಕೊಂಡು ಹೋದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಗಾಂಜಾ ಮಾರಾಟ ಮಾಡುತ್ತಿರಲಿಲ್ಲ, ನಾನು ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯನ್ನು ನಾನು ಆ ದಿನ ನೋಡಿಲ್ಲ, ಇದೇ ದಿನ ಮೊದಲ ಬಾರಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಶ್ರೀ.ಹೆಚ್.ವಿ.ರಂಗನಾಥ ರೆಡ್ಡಿ ವಕೀಲರಿಂದ 2 ನೇ ಆರೋಪಿತ ಪರವಾಗಿಃ</u>**

**9.** 2 ನೇ ಆರೋಪಿಯ ಮನೆ ಶೀಟಿನ ಮನೆ. ಆ ಮನೆಗೆ ಗೇಟ್ ಇರಲಿಲ್ಲ. 2 ನೇ ಆರೋಪಿ ಆತನ ಮನೆಯ ಮುಂದೆ ನಿಂತಿದ್ದನು. ನಿಶಾನೆ ಪಿ4 ರಲ್ಲಿ ತೆಂಗಿನ ಗಿಡ, ಅಡಿಕೆ ಗಿಡ ಮತ್ತು ನುಗ್ಗೇಗಿಡ ಕಂಡುಬರುವುದಿಲ್ಲ ಎಂದರೆ ಅವು ಇನ್ನೊಂದು ಬದಿಯಲ್ಲಿದ್ದವು ಎಂದು ಸಾಕ್ಷಿ ಹೇಳುತ್ತಾರೆ. ಗಾಂಜಾವನ್ನು 2 ನೇ ಆರೋಪಿಯ ಮನೆಯ ಹಿತ್ತಲಲ್ಲಿ ಪ್ಯಾಸೇಜ್ ನಲ್ಲಿ ಗಿಡದ ಬುಡದಲ್ಲಿ ಇಟ್ಟಿದ್ದರು. ನಿಶಾನೆ ಪಿ4 ರಲ್ಲಿ ಕಂಡುಬರುವ ಚೀಲಗಳು ಗಾಂಜಾ ಚೀಲಗಳೇ ಎಂದು ನನಗೆ ಗೊತ್ತಿಲ್ಲ. ತೆಂಗಿನ ಗಿಡ, ಅಡಿಕೆ ಗಿಡ ಮತ್ತು ನುಗ್ಗೇಗಿಡ ಹಿತ್ತಲಲ್ಲಿ ಇದ್ದವು ಎಂದು ಮಹಜರಿನಲ್ಲಿ ಬರೆಸಿದ್ದಾರೋ ಎಂದು ಈಗ ನೆನಪಿಲ್ಲ. 2 ನೇ ಆರೋಪಿಗೆ ಶೋಧನಾ ಜ್ಞಾಪನ ಪತ್ರ ಕೊಟ್ಟಿದ್ದಾರೋ ಎಂದು ನೆನಪಿಲ್ಲ. 1 ನೇ ಆರೋಪಿ 2 ನೇ ಆರೋಪಿಯ ಮನೆಗೆ ಕರೆದುಕೊಂಡು ಹೋದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿ ಕಾಂಪೌಂಡು ಒಳಗೆ ನಿಂತಿದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿಯನ್ನು ತೋರಿಸಿ ನಾನು ಆತನಿಂದ ಗಾಂಜಾ ಖರೀದಿ ಮಾಡಿದ್ದೇನೆಂದು 1 ನೇ ಆರೋಪಿ ಹೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಪಿ4 ಮತ್ತು 6 ರಲ್ಲಿ ನಾರಾಯಣಪ್ಪ ಇಲ್ಲ. ನಿಶಾನೆ ಪಿ4 ಮತ್ತು 6 ರಲ್ಲಿ ಕಾಣುವ ಮನೆ ನಾರಾಯಣಪ್ಪನ ಮನೆಯ ಹಿತ್ತಲ ಕಡೆಯದ್ದಾಗಿರುತ್ತದೆ. ನಿಶಾನೆ ಪಿ4 ಮತ್ತು 6 ರಲ್ಲಿ ಕಾಣುವ ಮನೆ ನಾರಾಯಣಪ್ಪನ ಮನೆ ಅಲ್ಲ ಎಂದರೆ ಸರಿಯಲ್ಲ. ಗಾಂಜಾ ಮಾರಾಟ ಮಾಡಲು ಇಟ್ಟಿದ್ದೇನೆಂದು 2 ನೇ ಆರೋಪಿ ಹೇಳಿದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿಯ ಮನೆಯ ಹಿತ್ತಲಿನ ಮರದ ಅಡಿಯಲ್ಲಿ ಗಾಂಜಾ ಚೀಲ ಇಟ್ಟಿದ್ದೆನು ಎಂದು 2 ನೇ ಆರೋಪಿ ಹೇಳಿಲ್ಲ ಎಂದರೆ ಸರಿಯಲ್ಲ. ಮರದ ಅಡಿಯಲ್ಲಿ ಎರಡು ಚಿಕ್ಕ, ಚಿಕ್ಕ ಚೀಲಗಳು ಇದ್ದವು. ಆ ಚೀಲಗಳು ಯಾವ ಕಂಪನಿಯದ್ದು ಮತ್ತು ಅವುಗಳ ಬಣ್ಣ ಏನು ಎಂದು ಹೇಳಲು ಆಗುವುದಿಲ್ಲ. ತೂಕದ ಯಂತ್ರದ ಕಂಪನಿಯ ಹೆಸರು ಗೊತ್ತಿಲ್ಲ. ನಾರಾಯಣಪ್ಪ ಜೋಳದ ಬೆಳೆಯ ಮಧ್ಯದಲ್ಲಿ ಗಾಂಜಾ ಗಿಡ ಬೆಳೆಸಿದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಜಾಗ ಲಕ್ಷ್ಮೀದೇವಮ್ಮನದು

ಎಂದು 2 ನೇ ಆರೋಪಿ ಹೇಳಿದನು. ನಾನು ನೋಡಿದಾಗ ಗಾಂಜಾ ಗಿಡ ಬೆಳೆದ ಜಾಗದಲ್ಲಿ ಗುಂಡಿ ಬಿದ್ದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಗಾಂಜಾವನ್ನು ಜಪ್ತುಪಡಿಸಿಕೊಂಡು, ಸಿ ಎಂಬ ಅಕ್ಷರದಿಂದ ಸೀಲ್ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ, ಪೋಲೀಸ್ ಠಾಣೆಯಲ್ಲಿ ಮಹಜರ್ ತಯಾರಿಸಿ, ಅಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿ ಪೋಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಗಾಂಜಾಕ್ಕೂ 2 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ5 ಮತ್ತು 8 ನ್ನು ಈ ಕೇಸಿಗೋಸ್ಕರ ಪೋಲೀಸರು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. 2 ನೇ ಆರೋಪಿಯನ್ನು ನಾನು ಆ ದಿನ ನೋಡಿಲ್ಲ, ಇದೇ ದಿನ ಮೊದಲ ಬಾರಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು